ಒಂದೇ ಕಡೆ ನೀರಿಲ್ಲ, ಹಲವಾರು ಹೊಂಡಗಳಲ್ಲಿ ಬೇರೆ ಬೇರೆ ಕಡೆ ನೀರಿದೆ. ಸಣ್ಣ ಪಂಪುಗಳನ್ನು ಏಕೆ ಉಪಯೋಗಿಸುತ್ತಾರೆ ಎಂದರೆ ನೀರು ಒಂದೇ ಕಡೆ ಇರುವುದಿಲ್ಲ, ಬೇರೆ ಬೇರೆ ಕಡೆ ಹಲವಾರು ಹೊಂಡಗಳಲ್ಲಿ ನೀರು ಇರುತ್ತದೆ. ಈ ಸಣ್ಣ ಪಂಪ್‌ಸೆಟ್ಟನ್ನು ಬೇರೆ ಬೇರೆ ಸ್ಥಳಗಳಲ್ಲಿಟ್ಟು ಅಲ್ಲಿಂದ ನೀರನ್ನು ಎತ್ತಲು ಸಣ್ಣ ರೈತರಿಗೆ ಸಾಧ್ಯವಾಗುವ ಹಿನ್ನೆಲೆಯಲ್ಲಿ ಸರ್ಕಾರ ತಕ್ಷಣವೇ, ಅಂದರೆ ಇನ್ನು ಡಿಲೇ ಮಾಡಬಾರದು, ಇವತ್ತು ನಮಗೆ ಭರವಸೆ ಕೊಟ್ಟಮೇಲೆ ಆರು ತಿಂಗಳು ಅಥವಾ ಒಂದು ವರ್ಷದ ನಂತರ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಇನ್ನು ಒಂದು ವಾರದೊಳಗೆ ಸಣ್ಣ ರೈತರಿಗೆ ಕನಿಷ್ಠ 50 ಲೀಟರ್‌ನಷ್ಟು ಸೀಮೇಎಣ್ಣೆಯನ್ನು ಸಬ್ಸಿಡೈಸ್ಡ್ ದರದಲ್ಲಿ, ಹಿಂದೆ ಸರ್ಕಾರ ಕೊಡುತ್ತಿದ್ದಂಥ ಪದ್ಧತಿಯಲ್ಲಿ ಕೊಡಬೇಕು ಮತ್ತು ಅದನ್ನು ಕಾರ್ಡುಗಳ ಮೂಲಕ ವಿತರಣೆ ಮಾಡಬೇಕು ಎನ್ನುವಂಥ ಆಗ್ರಹವನ್ನು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮಾಡಲು ಇಚ್ಛಿಪಡುತ್ತೇನೆ.

ಶ್ರೀ ಜಿ. ಬಸವೆಣ್ಣಪ್ಪ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, ಸೀಮೆಎಣ್ಣೆಯನ್ನು ಅಗ್ರಿಕಲ್ಚರಲ್ ಪರ್ಪಸ್‌ಗೆ ಕೊಡುವುದಕ್ಕೆ 1966ರ ಆಜ್ಞೆ ಪ್ರಕಾರ ಅನುಮತಿ ಇತ್ತು. That order was repealed in 1993. ಈಗ ಪಡಿತರ ಕಾರ್ಡುದಾರರಿಗೆ ಸೀಮೆಎಣ್ಣೆಯನ್ನು ಕೊಡುವುದೇ ಕಷ್ಟವಾಗಿದೆ. ಸುಮಾರು 75 ಸಾವಿರ ಕಿಲೋ ಲೀಟರ್ ಸೀಮೆಎಣ್ಣೆ ಬೇಕು. ಆದರೆ ಕೇಂದ್ರ ಸರ್ಕಾರ ಕೊಡುತ್ತಿರುವುದು ಕೇವಲ 54 ಸಾವಿರ ಕಿಲೋ ಲೀಟರ್ ಮಾತ್ರ. ಅಗ್ರಿಕಲ್ಚರಲ್ ಪರ್ಪಸ್‌ಗೆ ಕೊಡುವಂಥ ಆರ್ಡರ್ ರಿಪೀಲ್ ಆದುದರಿಂದ ಮಾನ್ಯ ಸದಸ್ಯರು ಕೇಳಿರುವಂತೆ ಕೊಡುವುದಕ್ಕೆ ಆಗುವುದಿಲ್ಲ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರಲು ಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಂದಿನಿ ಹಾಲು ಸರಬರಾಜಿನಲ್ಲಿ ಡಿ.ಡಿ.ಟಿ. ಮತ್ತ ಕ್ಲೋರಿನ್ ವಾಸನೆ ಬರುತ್ತಿರುವ ಬಗ್ಗೆ.

+ ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಉಪಾಧ್ಯಕ್ಷರೇ, ಕಳೆದ 10 ದಿನಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಅದರಲ್ಲೂ ವಿಶೇಷವಾಗಿ ಮಂಗಳೂರು ನಗರ, ಉಳ್ಳಾಲ, ಸುರತ್ಕಲ್ ಇತ್ಯಾದಿ ಪಟ್ಟಣಗಳಲ್ಲಿ ನಂದಿನಿ ಹಾಲು ಸರಬರಾಜಿನಲ್ಲಿ ಡಿ ಡಿ ಟಿ ವಾಸನೆ ಬರುತ್ತಿದ್ದು, ಈ ವಿಚಾರದಲ್ಲಿ ಸಾರ್ವಜನಿಕರು ಇದರ ಬಗ್ಗೆ ಬಹಳಷ್ಟು ನನ್ನ ಗಮನವನ್ನು ಸೆಳೆದಿದ್ದಾರೆ. ಕೆಲವು ಸಲ ಡಿ ಡಿ ಟಿ ವಾಸನೆ, ಕೆಲವು ಸಲ ಕ್ಲೋರಿನ್ ವಾಸನೆ ಹೀಗೆ ಬರುತ್ತಿದ್ದು, ಒಟ್ಟಿನಲ್ಲಿ ಹಾಲಿನಲ್ಲಿ ಯಾವ ತರಹದ ವಾಸನೆ ಇರಬೇಕೋ ಅದು ಆ ರೀತಿಯಲ್ಲಿ ಇಲ್ಲ. ಇದರಿಂದಾಗಿ ಕಾಫಿ, ಮೊಸರು, ಮಜ್ಜಿಗೆ ಯಾವುದನ್ನೂ ಮಾಡಲು ಆಗುತ್ತಿಲ್ಲ. ಇದರ ಬಗ್ಗೆ ಕ್ವಾಲಿಟಿ ಕಂಟ್ರೋಲ್‌ನವರ ಹತ್ತಿರ ನಾವು ವಿಚಾರಿಸಿದಾಗ ಅವರ ಉತ್ತರವೆಂದರೆ, ಹಾಲಿನ ಉತ್ಪಾದನೆ ಮತ್ತು ಶೇಖರಣೆ ಕಡಿಮೆಯಾಗಿದೆ. ಆದುದರಿಂದ ಬೇರೆ ಕಡೆಗಳಿಂದ ಅಂದರೆ ಹಾಸನದಿಂದ ಅಲ್ಲಿಗೆ ಹಾಲು ಸರಬರಾಜು ಆಗುತ್ತಿದೆ. ಮಂಗಳೂರಿನಲ್ಲಿ ಕೆಲವು ಕಡೆ ಅದನ್ನು ಮಿಕ್ಸ್ಡ್ ಮಾಡಿ ನಂತರ ಪ್ಯಾಕೆಟ್ ಮಾಡಿ ನಂದಿನಿ ಹಾಲನ್ನು ಸರಬರಾಜು ಮಾಡುತ್ತಿದ್ದಾರೆ. ಅದೂ ಅಲ್ಲದೆ ಅಲ್ಲಿ ಇರುವಂಥ ಯಂತ್ರದಲ್ಲೂ ಕೂಡ ತೊಂದರೆ

ಉಂಟಂತೆ. ಅಲ್ಲಿನ ಯಂತ್ರದಿಂದಲೂ ಈ ರೀತಿ ಬರುವ ಸಾಧ್ಯತೆ ಉಂಟು ಎಂದು ಅವರು ಹೇಳುತ್ತಿದ್ದಾರೆ. ಆದುದರಿಂದ ನಾನು ರಾಜ್ಯ ಸರ್ಕಾರವನ್ನು ವಿನಂತಿ ಮಾಡುತ್ತಿದ್ದೇನೆ, ಜನರ ನಿತ್ಯೋಪಯೋಗಿ ವಸ್ತುವಾದಂಥ ಹಾಲನ್ನು ಅದರಲ್ಲೂ ಜನರ ಆರೋಗ್ಯದ ದೃಷ್ಟಿಯಿಂದ ದಯವಿಟ್ಟು ಇದರ ಬಗ್ಗೆ ಕಾಳಜಿ ತೆಗೆದುಕೊಂಡು ಇದನ್ನು ಪರೀಕ್ಷೆ ಮಾಡಬೇಕು. ಇದರ ಜೊತೆಗೆ ಮಂಗಳೂರು ನಗರದಲ್ಲಿ ಕೃಷ್ಣಾ ಹಾಲು ಸರಬರಾಜು ಎಂದು ಉಂಟು. ಅದರಲ್ಲಿ ಏನೂ ತೊಂದರೆ ಇಲ್ಲ. ಆದ್ದರಿಂದ ದಯಮಾಡಿ ಇದರ ಬಗ್ಗೆ ಜಾಗ್ರತೆ ವಹಿಸಿ, ಇದರಲ್ಲಿ ಏನಾದರೂ ಕಲಬೆರಕೆಯಾಗುತ್ತಿದೆಯೇ ಎಂದು ಪರಿಶೀಲಿಸಿ ಇದರಿಂದ ಜನರ ಆರೋಗ್ಯಕ್ಕೆ ತೊಂದರೆಯಾಗದಂತೆ ಇದನ್ನು ತಕ್ಷಣ ನಿಲ್ಲಿಸಿ, ಬದಲಿ ವ್ಯವಸ್ಥೆ ಮಾಡಿಕೊಡಬೇಕೆಂದು ಸರ್ಕಾರವನ್ನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, ಅವರು ಹೇಳುತ್ತಿರತಕ್ಕಂಥ ವಿಚಾರದ ಬಗ್ಗೆ ನಾನು ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ದಕ್ಷಿಣ ಕನ್ನಡ ಹಾಲು ಒಕ್ಕೂಟದಲ್ಲಿ ದಿನಾ ಸುಮಾರು 90 ಸಾವಿರ ಲೀಟರ್ ಹಾಲಿನ ಬೇಡಿಕೆ ಇದೆ. ಆದರೆ ಉತ್ಪಾದನೆ ಇರತಕ್ಕಂಥಾದ್ದು 55 ಸಾವಿರ ಲೀಟರ್ ಮಾತ್ರ. ಸುಮಾರು 45 ಸಾವಿರ ಲೀಟರ್ ಕಡಿಮೆಯಾಗುತ್ತದೆ. ಆದ ಪ್ರಯುಕ್ತ ನಾವು ಉತ್ಪಾದನೆಯಾದಂಥ 55 ಸಾವಿರ ಲೀಟರ್ ಹಾಲನ್ನು ಮಾರಿದ ನಂತರ ಕಡಿಮೆಯಾಗತಕ್ಕಂಥಾದ್ದಕ್ಕೆ ಹಾಸನ ಮುಂತಾದ ಬೇರೆ ಬೇರೆ ಕಡೆಗಳಿಂದ ತರಿಸಿಕೊಂಡು, ಅದಕ್ಕೆ ಪೌಡರ್‌ಅನ್ನು ಮಿಕ್ಸ್ ಮಾಡಿ ಹಾಲು ಮಾಡಿ ಮಾರತಕ್ಕಂಥಾದ್ದು ನಿಜ. ಸುಮಾರು ಶೇ.10ರಷ್ಟು ಪೌಡರ್‌ಅನ್ನು ಸೇರಿಸಿ ಹಾಲು ಪ್ಯಾಕೆಟ್ ಮಾಡಿ ಮಾರುತ್ತಿದ್ದರು. ಅದರಿಂದಾಗಿ ತಾವು ಹೇಳಿದ ಹಾಗೆ ವಾಸನೆ ಬರುತ್ತಿತ್ತು. ಮತ್ತು ಅದರಿಂದ ಆರೋಗ್ಯಕ್ಕೆ ಹಾನಿಯಾಗುತ್ತದೆ ಎನ್ನುವ ಆತಂಕ ಜನರಲ್ಲಿ ಮೂಡಿದ್ದರೆ ಅದು ಸರ್ವೇ ಸಾಮಾನ್ಯ. ಇದು ನಮ್ಮ ಗಮನಕ್ಕೆ ಬಂದ ಮೇಲೆ ನಾವು ಅದನ್ನು ಶೇ. 2.5ಕ್ಕೆ ಇಳಿಸಿ ಈಗ ತೊಂದರೆಯಾಗದ ಹಾಗೆ, ಹಾಲು ಒಡೆಯದ ಹಾಗೆ ಅಥವಾ ಹೆಚ್ಚು ವಾಸನೆ ಬರದ ಹಾಗೆ ಕ್ರಮ ಕೈಗೊಂಡಿದ್ದೇವೆ. ಹಾಲಿನ ಪುಡಿಯನ್ನು ಸೇರಿಸುವುದರಿಂದ ಯಾವುದೇ ರೀತಿಯ ಹಾನಿ ಆರೋಗ್ಯಕ್ಕೆ ಆಗುವುದಿಲ್ಲ ಎನ್ನುವಂಥ ವಿಚಾರವನ್ನು ತಮ್ಮ ಮೂಲಕ ಸ್ಪಷ್ಟಪಡಿಸುತ್ತೇನೆ.

ಪಡಿತರ ವ್ಯವಸ್ಥೆಯಲ್ಲಿ ಪಡೆಯುವ ಚಿಮಣಿಎಣ್ಣೆ ಕೂಪನ್ ಪಡೆಯಲು ಕಡ್ಡಾಯವಾಗಿ ಫೋಟೋ ಅಳವಡಿಸುವ ಬಗ್ಗೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಸನ್ಮಾನ್ಯ ಉಪಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ಮಂಗಳೂರು ಮಹಾನಗರ ಪಾಲಿಕೆಯ ಕ್ಷೇತ್ರದ ವ್ಯಾಪ್ತಿಯಲ್ಲಿ ಪಡಿತರ ಕಾರ್ಡ್ ಇರುವಂಥ ಪ್ರತಿಯೊಬ್ಬರೂ ಚಿಮಣಿಎಣ್ಣೆಯನ್ನು ಪಡೆಯಬೇಕಾದರೆ ಅದಕ್ಕೆ ಸಂಬಂಧಪಟ್ಟ ಕೂಪನ್‌ಅನ್ನು ಪಡೆಯಬೇಕಾಗಿದೆ. ಕೂಪನ್‌ಅನ್ನು ಪಡೆಯಬೇಕಾದರೆ ಕಡ್ಡಾಯವಾಗಿ ಫೋಟೋವನ್ನು ಅಳವಡಿಸಬೇಕು ಎಂದು ರಾಜ್ಯ ಸರ್ಕಾರ ಆದೇಶ ಮಾಡಿದೆ ಎಂದು ತಿಳಿದುಕೊಂಡಿದ್ದೇನೆ.